ವಿಚಾರ

# ಉಡುಗೊರೆ ಎಂಬ ತಲೆನೋವು!



**ಉಡುಗೊರೆಯ ಗಾತ್ರ ನೋಡಿ ಅದರ ಬೆಲೆ ಅಳೆಯುವುದಕ್ಕಾಗದು. ಹೊರಗಿನ ಪ್ಯಾಕೆಟ್ ದೊಡ್ಡದಾದರೂ ಒಳಗೆ ಏನಿರುತ್ತದೋ ಆ ದೇವರಿಗೇ ಗೊತ್ತು**

★ ಮಂಜುಳಾರಾಜ್

ಮದುವೆಯಲ್ಲಿ ಎಲ್ಲರೂ ಊಟಕ್ಕೆ ಕುಳಿತಿದ್ದಾರೆ, ಇನ್ನೇನು ಊಟ ಮಾಡ ಬೇಕು. ಆಗ ಅಲ್ಲಿಗೆ ವರನ ತಂದೆ ಬರುತ್ತಾರೆ: 'ಯಾರೆಲ್ಲಾ ಮುಯ್ಯಿ ನೀಡಿಲ್ಲವೋ ಅವರೆಲ್ಲಾ ಊಟದ ಎಲೆ ಬಿಟ್ಟು ಏಳಿ' ಎಂದು ಅಬ್ಬರಿಸುತ್ತಾನೆ! ಅಲ್ಲಿಯೇ ವಾಗ್ವಾದ ಪ್ರಾರಂಭವಾಗುತ್ತದೆ.

–ಇದು ಹಳ್ಳಿಯ ಜನ ಜೀವನದ ಸೊಗಡನ್ನು ಹೊಂದಿರುವ ಒಂದು ಕನ್ನಡ ಚಲನ ಚಿತ್ರದ ದೃಶ್ಯ. ಈ ದೃಶ್ಯವನ್ನು ನೋಡಿದಾಗ ಹೀಗೂ ಇರುತ್ತಾರಾ ಎಂದು ನಾಗರಿಕ ಜನಾಂಗ ಮೂಗು ಮುರಿಯಬಹುದು. ಆದರೂ ಯಾವುದೇ ಸಮಾರಂಭವಾಗಲೀ ಅಲ್ಲಿಗೆ ಬಂದವರು ಅತಿಥೇಯರಿಗೆ ಉಡುಗೊರೆ ಕೊಟ್ಟು ಊಟ ಮುಗಿಸಿಕೊಂಡು ಹೋಗುವುದು ಹಿಂದಿನಿಂದಲೂ ಬಂದ ಪದ್ಧತಿ. ಉಡುಗೊರೆಯನ್ನು ಅತಿಥೇಯರು ನಿರೀಕ್ಷೆ ಮಾಡುತ್ತಿದ್ದುದು ಸಹಜ.

ಉಡುಗೊರೆಯ ಗಾತ್ರ ನೋಡಿ ಅದರ ಬೆಲೆ ಅಳೆಯುವುದಕ್ಕಾಗದು. ಹೊರಗಿನ ಪ್ಯಾಕೆಟ್ ದೊಡ್ಡದಾದರೂ ಒಳಗೆ ಏನಿರುತ್ತದೋ ಆ ದೇವರಿಗೇ ಗೊತ್ತು, ಅನೇಕ ಬಾರಿ ಗಾತ್ರವನ್ನು ನೋಡಿ ಬೇಸ್ತು ಬೀಳುವುದೂ ಉಂಟು. ಆಗ ನಿರಾಸೆ ಆಗುವುದೂ ಉಂಟು.

ಇದು ಉಡುಗೊರೆಯನ್ನು ಸ್ವೀಕರಿಸುವವರ ಕಥೆಯಾದರೆ, ಯಾವುದೇ ಆಹ್ವಾನ ಪತ್ರಿಕೆ ಬಂದ ತಕ್ಷಣ ಮದುವೆಯ ಸಮಾರಂಭಕ್ಕೆ ಹೋಗೋಣವೆಂದು ಸಂಭ್ರಮಿಸುವುದಂತೂ ಇದ್ದೇ ಇದೆ. ಆದರೆ ನಂತರದ ಪ್ರಶ್ನೆ 'ಏನಪ್ಪಾ ಉಡುಗೊರೆ ಕೊಡಬೇಕು' ಎನ್ನುವುದು. ಆಗ ಪ್ರಾರಂಭವಾಗುತ್ತದೆ– ಅವರು ನಮ್ಮ ಮನೆಯ ಸಮಾರಂಭಕ್ಕೆ ಏನು ಕೊಟ್ಟಿದ್ದರು ಎನ್ನುವ ನೆನಪನ್ನು ಕೆದಕುವಾಟ. ಕೆಲವರಂತೂ ಬಂದ ಉಡುಗೊರೆಗಳ ಲಿಸ್ಟ್ ಅನ್ನೇ ಬರೆದಿಡುತ್ತಾರೆ. ಅವರು ನೀಡಿದ್ದಕ್ಕೆ ಸಮನಾಗಿ ಇವರೂ ಉಡುಗೊರೆ ಖರೀದಿಸುತ್ತಾರೆ.

ಈ ಉಡುಗೊರೆ ಕೊಟ್ಟು ತೆಗೆದು ಕೊಳ್ಳುವಾಟದಲ್ಲಿ ಕೊಟ್ಟವರು, ತೆಗೆದು ಕೊಂಡವರು ಇಬ್ಬರಿಗೂ ಅದು ಉಪಯೋಗಕ್ಕೆ ಬಾರದು! ನನ್ನ ಗೆಳತಿಯ ಮನೆಯ ಗೃಹ ಪ್ರವೇಶಕ್ಕೆ ಹನ್ನೆರಡು ಗಡಿಯಾರಗಳು ಬಂದಿದ್ದುವಂತೆ; ಅದನ್ನು ಇಟ್ಟು ಕೊಂಡು ಹೊಸ ಅಂಗಡಿಯೇ ತೆರೆಯಬೇಕೋ ಎಂಬ ತಲೆಬಿಸಿ. ಅನೇಕ ಬಾರಿ ಉಡುಗೊರೆ ನೀಡುವಾಗ ತಮ್ಮಲ್ಲಿ ಇರುವುದನ್ನು ನೀಡಿ ಮನೆಯಲ್ಲಿ ಸ್ವಲ್ಪ ಜಾಗ ಖಾಲಿ ಮಾಡಿಕೊಳ್ಳೋಣ ಎಂದು ಭಾವಿಸುವವರೇ ಹೆಚ್ಚು. ಉಡುಗೊರೆ ಕೊಟ್ಟ ಹಾಗೂ ಆಯಿತು, ಮನೆಯಲ್ಲಿ ಕಸ ಕ್ಲೀನ್ ಆದ ಹಾಗೂ ಆಯಿತು! ಹೀಗಾಗಿ ಅನೇಕ ಬಾರಿ ಕೆಲಸಕ್ಕೆ ಬಾರದ ವಸ್ತುಗಳೇ ಉಡುಗೊರೆಯ ರೂಪದಲ್ಲಿ ಬಂದಿರುತ್ತವೆ.

ಬಹಳಷ್ಟು ಜನರು ಹೇಳುವುದು– ಉಡುಗೊರೆಯನ್ನು ಹಣದ ರೂಪದಲ್ಲಿ ನೀಡಿದಾಗ ಸ್ವಲ್ಪವಾದರೂ ಉಪಯೋಗವಾಗುತ್ತದೆ ಎಂದು. ಅದು ಸ್ವಲ್ಪ ಮಟ್ಟಿಗೆ ನಿಜವೇ. ಆದರೆ ಅಲ್ಲೂ, ಛೆ ಬರೀ ನೂರು ರೂಪಾಯಿ ನೀಡುವುದೆ.. ಎಂಬ ತಾಕಲಾಟ. ಹೆಚ್ಚು ಕೊಡಲು ಹಣವಿಲ್ಲ, ಕಡಿಮೆ ನೀಡಲು ಮನಸ್ಸಿಲ್ಲ!

ಈ ಉಡುಗೊರೆಯ ಫಜೀತಿಯೇ ಬೇಡವೆಂದು ಅನೇಕರು ಹೂ ಗುಚ್ಛಗಳನ್ನು ನೀಡುತ್ತಾರೆ. ಅವು ನೋಡಲು ಸ್ವಲ್ಪ ಹೊತ್ತಿಗೆ ಖುಷಿ ಎನ್ನಿಸಿದರೂ, ಮದುವೆ ಮಂಟಪದ ಹಿಂದೆ ಹೂ ಗುಚ್ಛಗಳ ರಾಶಿಯೇ ಬಂದು ಬಿದ್ದಿರುತ್ತದೆ. ಮದುಮಕ್ಕಳ ಮನೆಯವರು ಅದನ್ನು ಬಳಿಕ ಮೂಸಿಯೂ ನೋಡುವುದಿಲ್ಲ. ಸಮಾರಂಭದ ಸ್ಥಳ ಮನೆಯಿಂದ ದೂರವಿದ್ದರಂತೂ ಅದನ್ನು ಕಸ ಗುಡಿಸುವವರೇ ಗುಡಿಸಿ ತೆಗೆಯಬೇಕು.

ಕೆಲವರು ಸಂಭಾವಿತರಿರುತ್ತಾರೆ: ಉಡುಗೊರೆಯ ಈ ಕಿರಿಕಿರಿಯೇ ಬೇಡವೆಂದು 'ಆಶೀರ್ವಾದವೇ ಉಡುಗೊರೆ– ಬೇರೆ ಉಡುಗೊರೆ ತರಬೇಡಿ' ಎಂದು ಸ್ಪಷ್ಟವಾಗಿ ನಮೂದಿಸುತ್ತಾರೆ. ಇದು ಬಹಳ ಒಳ್ಳೆಯ ವಿಧಾನ. ಬೆಂಗಳೂರಿನಂತಹ ಮಹಾನಗರದಲ್ಲಿ ಒಂದೆಡೆಯಿಂದ ಮತ್ತೊಂದೆಡೆಗೆ ಹೋಗಲು ಸಮಯ, ಹಣ ಎರಡೂ ಖರ್ಚು ಮಾಡಬೇಕು. ಆಟೋ ದರ ಗಗನಕ್ಕೇರಿದೆ, ಪೆಟ್ರೋಲ್ ಬೆಲೆ ಆಕಾಶಕ್ಕೆ ಮುಟ್ಟಿದೆ. ಅದರ ಮಧ್ಯೆ ಟ್ರಾಫಿಕ್‌ಗೆ ಸಿಕ್ಕಿಕೊಂಡು ಉಡುಗೊರೆಗೂ ಹಣ ಖರ್ಚು ಮಾಡಬೇಕೆಂದರೆ ಕಷ್ಟ. ಆದರೆ ಕಷ್ಟವನ್ನು ಹೇಳಿಕೊಳ್ಳುವಂತಿಲ್ಲ. ಮನಸ್ಸಲ್ಲೇ ಕೊರಗಿ ತರುವ ಉಡುಗೊರೆಯಿಂದ ಮದುಮಕ್ಕಳಿಗೆ ಒಳ್ಳೆಯದಾಗುತ್ತದೆಯೆ? ಹಾಗಾಗಿ, 'ಬಂದು ಹರಸಿದರೆ ಸಾಕು' ಎನ್ನುವವರ ಸಂತತಿ ಸಾವಿರವಾಗಲಿ ಎಂದೇ ಹಾರೈಸುತ್ತೇನೆ.

ಇತ್ತೀಚೆಗೆ ಅಂತಹ ಒಂದು ಸಮಾರಂಭಕ್ಕೆ ಹೋಗಿದ್ದೆ. ಆಹ್ವಾನ ಪತ್ರಿಕೆಯಲ್ಲಿ 'ಆಶೀರ್ವಾದವೇ ಉಡುಗೊರೆ' ಎಂದು ಮುದ್ರಿಸಿದ್ದರು. ಆದರೂ ಜನ ಬಿಡುತ್ತಾರೆಯೇ? ಸಾಕಷ್ಟು ಜನ ಉಡುಗೊರೆಯನ್ನು ತಂದೇ ಇದ್ದರು; ಇವರು ತೆಗೆದು ಕೊಳ್ಳುತ್ತಲೇ ಇದ್ದರು! ಆಹ್ವಾನ ಪತ್ರಿಕೆಯಲ್ಲಿನ ಅವರ ಕೋರಿಕೆಯನ್ನು ಮನ್ನಿಸಿ ಬರಿಗೈನಲ್ಲಿ ಬಂದವರು ಸ್ವಲ್ಪ ತಬ್ಬಿಬ್ಬಾಗಿದ್ದುದು ಸ್ಪಷ್ಟವಾಗಿ ಕಾಣಿಸಿತು. ಆಹ್ವಾನ ಪತ್ರಿಕೆಯಲ್ಲಿ ಸೂಚನೆ ಮುದ್ರಿಸಿದ ಬಳಿಕ ಅದನ್ನು ಸ್ಪಷ್ಟವಾಗಿ ಪಾಲಿಸಬೇಕು. ಇಲ್ಲವಾದಲ್ಲಿ ಬಂದವರಿಗೆ ಅವಮಾನ!

ಕೆಲವು ಪದ್ಧತಿಗಳು ಸರಿಯೋ ತಪ್ಪೋ ನಮ್ಮ ಜೀವನದಲ್ಲಿ ಹಾಸು ಹೊಕ್ಕಾಗಿರುತ್ತದೆ. ಕಾಲಕ್ಕೆ ತಕ್ಕಂತೆ ಅದನ್ನು ಬದಲಾಯಿಸಿದರೆ ತಪ್ಪೇನೂ ಇಲ್ಲ. ಏಕೆಂದರೆ ಎಲ್ಲವೂ ಮನುಷ್ಯನ ಅನುಕೂಲಕ್ಕೇ ಅಲ್ಲವೆ?